ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No.236/2023**

**CW : 08 PW: 07**

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 23.06.2026

| | |
|---|---|
| ಹೆಸರು | : ಶೀಲಾ |
| ಗಂಡನ ಹೆಸರು | : ಪಾಂಡು ರಾಠೋಡ |
| ವಯಸ್ಸು | : 33 |
| ಉದ್ಯೋಗ | : ಒಕ್ಕಲುತನ |
| ವಾಸಸ್ಥಳ | : ತರಿತಾಂಡ ಶಹಾಬಾದ |

<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನನಗೆ ಚಾಸಾ-1 4 ರಿಂದ 7 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ . ಆರೋಪಿತರು ಮತ್ತು ಚಾಸಾ-1 ರವರ ಮಧ್ಯ ಆಗಿರುವ ಜಗಳವನ್ನು ನಾನು ಪ್ರಾತ್ಯೆಕ್ಷವಾಗಿ ನೋಡಿರುವುದಿಲ್ಲ . ನಾನು ಜಗಳವನ್ನು ಬಿಡಿಸಿರುವುದಿಲ್ಲ. ನಾನು ಪೋಲಿಸರು ಮುಂದೆ ನನ್ನ ಹೇಳಿಕೆಯನ್ನು ನೀಡಿರುವುದಿಲ್ಲ . ಸದರಿ ಪ್ರಕರಣದಲ್ಲಿ ಯಾರು ದುರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ .

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ದಿನಾದಕ 24-01-2023 ರಂದು ರಾತ್ರಿ 8.00 ಗಂಟೆಗೆ ಚಾಸಾ-1 ರವರ ಮನೆಯ ಮುಂದೆ ಜಗಳದ ಸಪ್ಪಳ ಕೇಳಿ ಅಲ್ಲಿಗೆ ಹೋಗಿರುತ್ತೆನೆ ಎಂದರೆ ಸರಿಯಲ್ಲ .ಅಲ್ಲ ನಮ್ಮ ತಾಂಡದ 1 ರಿಂದ 5 ನೇ ಆರೋಪಿತರು ಚಾಸ-1 ರವರಿಗೆ ಅವ್ಯಚವಾಗಿ ಬೈಯುತ್ತಿದ್ದರು ಎಂದರೆ ಸರಿಯಲ್ಲ .1 ನೇ ಅರೋಪಿತನ್ನು ಚಾಸಾ-1 ರವರಿಗೆ ಅವ್ಯಚ ಶಬ್ದಗಳಿಂದ ಬೈಯುತ್ತಾ ಕೈ ಹಿಡಿದು ಎಳೇದು ಕೈಯಿಂದ ಬೆನ್ನಿನ ಮೇಲೆ ಹೋಡೆದರು ಎಂದರೆ ಸರಿಯಲ್ಲ. 3 ಮತ್ತು 4 ಅರೋಪಿತರು ಚಾಸಾ-1 ರವರ ತಲೆಯ ಕೂದಲು ಹಿಡಿದು ಜಗ್ಗಾಡಿ ಅವಮಾನ ಮಾಡಿ ಕೈಯಿಂದ ಹೋಡೆದಿರುತ್ತಾರೆ ಎಂದರೆ ಸರಿಯಲ್ಲ . 2 ಮತ್ತು 5 ಆರೊಪಿತರು ಚಾಸಾ-1 ರವರಿಗೆ ಅವಾಚ್ಯಶಬ್ದವಾಗಿ ಬೈದು ಚಾಸಾ-1 ರವರು ಚಿರಾಡುತ್ತಿರುವಾಗ ನಾನು ಚಾಸ-5 ರಿಂದ ಚಾಸಾ-7 ರವರು ಜಗಳ ಬಿಡಿಸಿರುತ್ತೆವೆ ಎಂದರೆ ಸರಿಯಲ್ಲ . ಜಗಳ ಬಿಟ್ಟು ಹೋಗುವಾಗ ಆರೋಪಿತರೆಲ್ಲರು ಚಾಸಾ-1 ರವರಿಗೆ ಜಿವ ಬೇದರಿಕೆ

ಹಾಕಿರುತ್ತಾರೆ ಎಂದರೆ ಸರಿಯಲ್ಲಾ . ಈ ಘಟನೆ ಕರಿತು ನಾನು ದಿನಾಂಕ 26-01-2023 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೆನೆ ಎಂದರೆ ಸರಿಯಲ್ಲ .ಸದರಿ ಪ್ರಕರಣದಲ್ಲಿ ಚಾಸಾ-1 ರವರು ದುರು ನೀಡಿರುತ್ತಾರೆ ಎಂದರೆ ಸರಿಯಲ್ಲ . ಈಗ ಓದಿ ಹೇಳಲಾದ ಹೇಳಿಕೆಯು ಸಾಕ್ಷಿಯು ಅಲ್ಲಗಳೆದಿದ್ದು ಇದನ್ನು ನಿಪಿ-7 ಎಂದು ಗುರುತಿಸಲಾಯಿತು . ನಾನು ನಿಪಿ-7 ರಲ್ಲಿರುವ ವಿಷಯಗಳು ತಿಳಿದಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದೆನೆ ಎಂದರೆ ಸರಿಯಲ್ಲ .

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಆರೋಪಿ ತರಪರ  ವಕೀಲರು ಪಾಟಿ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ .

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**